ಸಾಹೇಬ್ರಾ.. ಯಾರ ಅದೀರಿ ನೀವು, ನಮ್ಮದು ಇಲ್ಲಿ ಸೇಂದಿ ಮಾರು ಅಂಗಡಿ ಐತಿ. ನೀವು ಸೆರೆ, ಸೇಂದಿ ಕುಡಿಯಾಕ ಬಂದೀರೇಂತ ತಿಳಿದು ನಮ್ಮವ್ವ ಸೇಂದಿ ಕೊಟ್ಟಾಳ, ನೀವು ನೋಡಿದರ ಗರಿಗರಿ ಅಂಗಿ ಮಂದಿ ಅದಿರಿ, ಮುದುಕಿಗಿ ಏನ ತಿಳಿಬೇಕ, ಕ್ಷಮಾ ಮಾಡರಿ' ಎಂದನು.

ಬಂದ ಮಾಸ್ತರು ದಘೂತಿ ಆಸಾಮಿಗೆ ತಾವು ಬಂದ ಕಾರಣ ಅರುಹಿ ನಮ್ಮ ಕುದುರೆ ಎಲ್ಲಿಯಾದರೂ ಕಂಡರೆ ತಿಳಿಸಿ ಎಂದರು. ನಿಮ್ಮ ಕುದುರಿ ಸಿಕ್ಕರ ಎಲ್ಲಿ ತರಬೇಕ ಹೇಳ್ರೀ ತಂದ ಒಪ್ಪಿಸ್ತಿನೀ ಎಂದು ಭರವಸೆ ಕೊಟ್ಟ. ದಘೂತಿ ಆಸಾಮಿಯಲ್ಲಿ ಒಂದು ಬಗೆಯ ಆತ್ಮೀಯತೆ ಬೆಳೆಯಿತು, ನಿಧಾನಕ್ಕೆ ಹಾಕಿ ಮಾಸ್ತರು 'ಯಜಮಾನ ನಮಗ ಹೊಟ್ಟಿ ಹಸಿದು ಹೊಟ್ಯಾಗ ಬೆಂಕಿ ಬಿದ್ದಾಂಗ ಆಗೈತಿ, ಇಲ್ಲಿ ಎಲ್ಲೇರ ಊಟ ಸಿಗತ್ತೈತೇನ, ರೊಕ್ಕಾ ಕೊಡತೀವ ಊಟ ಕೊಟ್ಟರ ಸಾಕು' ಎಂದು ಹಲುಬಿದರು.

ಶಾಲೆಯಲ್ಲಿದ್ದಾಗ ಅಗದಿ ಟೈಮ್ ಟೈಮ್‌ಗೆ ಊಟ, ನಾಷ್ಟಾ, ಹಾಲು, ಹಣ್ಣು ತಿಂದಿದ್ದ ಈ ಮಾಸ್ತರ ಮಂದೀಗಿ ಈ ಅಡವ್ಯಾಗ ಏನ ಸಿಕ್ಕರೂ ತಿನಬೇಕಂತ ಅನಿಸಿತು. ಆವಾಗ ದಘೂತಿ ಹೇಳಿದಾ 'ಮೊದಲ ಹೇಳಬೇಕಲ್ಲರಿ, ಸಾಹೇಬ್ರ, ಎಷ್ಟ ಆರ ಮಂದಿ ಅದಿರೆಲ್ಲಾ. ಅರ್ಧತಾಸ ಟೈಮ್ ಕೊಡ್ರಿ, ಬಿಸಿ ಬಕ್ರಿ, ಅಂಡಾಕರಿ ಮಾಡಿಕೊಡ್ತೇವಿ' ಎಂದಾಗ ಅರ್ಧ ಊಟ ಮಾಡಿದ ತೃಪ್ತಿ ಮಾಸ್ತರರಿಗಾಯ್ತು. ದೂರದಲ್ಲಿ ಬಾಳೆಗೆ ನೀರುಣಿಸುತ್ತಿದ್ದ ತನ್ನ ಹೆಂಡತಿಯನ್ನು ಕೂಗಿ ಧಡೂತಿ ಕರೆಸಿಕೊಂಡ. ಅಡವಿಯಲ್ಲಿದ್ದರೂ ಬಹಳ ಚೆಲುವೆಯಾದ ಹೆಂಡತಿ ಬಂದು, ಬಂದವರಿಗೆ ನಮಸ್ಕರಿಸಿ ಒಳ ಹೋದಳು. ಅವರಿವರ ಗುಡಿಸಲು ತಿರುಗಿ ತತ್ತಿ ಗ್ವಾಳೆ ಮಾಡಿ, ಬ್ಯಾಡಗಿ ಕೆಂಪ ಒಣ ಮೆಣಸಿನಕಾಯಿಂದ ಮಾಡಿಟ್ಟ ಮಸಾಲಿ ಖಾರ ಹಾಕಿ ಘಮ ಘಮಾ ಅನ್ನಾಂಗ ಅಂಡಾಕರಿ ಸಾರ ಮಾಡಿ, ಬಿಸಿ ಬಕ್ರಿ ಬಡಿದು ಬಂದವರಿಗೆ ಹೊಟ್ಟೆ ತುಂಬಾ ಉಣಿಸಿದರು.

ಮಾಸ್ತರ ಮಂದೀಗಿ ತುಂಬಾ ಖುಷಿಯಾಯ್ತು. ಈಗ ಮನೆಯವರೆಲ್ಲಾ ಪರಿಚಯಸ್ತರಂತಾದರು. ಸಣ್ಣಗೆ ಧಡೂತಿ ಮಾಸ್ತರರಿಗೆ ಕೈ ಮುಗಿದು 'ಎಪ್ಪಾ ನಮ್ಮದೊಂದ ಹುಡುಗಿ ಕೊಡೋದು ಐತಿ, ಎಲ್ಲೇರ ವರಾ ಇದ್ರ ನೋಡ್ರಿ' ಎಂದ. ಆಗ ಕಬ್ಬಡ್ಡಿ ಮಾಸ್ತರು 'ಬೇಸಾಯ್ತು ಬಿಡು, ವರಕ್ಕೇನು ಕಡಿಮಿ, ಕನ್ಯಾನ ಸಿಗವಲ್ಲು' ಎಂದು ಹೇಳಿ ಅವರ ಮಗಳ ಮಾಹಿತಿ ಪಡಕೊಂಡರು. 'ನಮ್ಮ ಹುಡುಗಿ ಡಿಗ್ರಿ ಮುಗಿಸಿ, ಈಗ ಸಾಂಗ್ಲಿ ಮಹಾರಾಣಿ ಸೈನಿಕ ಸ್ಕೂಲದಾಗ ಕುದುರಿ ಸವಾರಿ ಕಲಸ್ತಾಳ, ಗಾಡಿ ಹೊಡಿತಾಳ, ಕುದುರಿ ಓಡಿಸ್ತಾಳ, ಕರಾಟೆ ಆಡತಾಳ, ಇಂಥ ವಿದ್ಯಾ ಬರಾಂಗಿಲ್ಲ ಅನಾಂಗ ಇಲ್ಲರಿ ಭಾಳಾ ಶ್ಯಾಣ್ಯಾ ಅದಾಳ್ರಿ. ಅವಳದಟ ಮದವಿ ಮಾಡಿ ಬಿಟ್ಟರ ನಮ್ಮ ಜವಾಬ್ದಾರಿ ಮುಗೀತ ನೋಡ್ರಿ' ಎಂದು ವಿವರಣೆ ನೀಡುತ್ತಿದ್ದಾಗ, ಇನ್ನೂ ಮದುವೆಯಾಗಿರದ ಹಾಕಿ ಮಾಸ್ತರ ಸೂರ್ಯಕಾಂತ ಕಡೆ ಎಲ್ಲರೂ ನೋಡಿ ನಸು ನಕ್ಕರು. ಸೂರ್ಯಕಾಂತನೂ ತನ್ನ ಕುಡಿ ಮೀಸೆಯಲ್ಲಿಯೇ ಸಣ್ಣಗೆ ನಕ್ಕು ಕನಸಿನ ಲೋಕಕ್ಕೆ ಬಿದ್ದನು. ಸೂರ್ಯಕಾಂತ ಮಾಸ್ತರರಿಗೂ ಇನ್ನೂ ಲಗ್ನ ಆಗಿರಲಿಲ್ಲ, ಕನ್ಯಾ ಹುಡುಕುತಿದ್ದರು. ಬಹುಶಃ



ರೊಟ್ಟಿ ಜಾರಿ ತುಪ್ಪದಾಗ ಬಿದ್ದಂಗ ಆಯ್ತು. ಮಾಸ್ತರ ಮಂದೀಗಿ ಬಂದ ಜವಾಬ್ದಾರಿ ನೆನಪ ಆಗಿ 'ನಾವ ಮತ್ತ ಬರತಿವರಿ ಹಿರ್ಯಾರ, ಪರಿಚಯ ಆಗಿ ಭಾಳ ಚಲೋ ಆಯ್ತು, ನಮ್ಮ ಕುದುರಿ ಸಿಕ್ಕರ ತಿಳಿಸ್ರೀ ಎಂದು ಎದ್ದು ದುಡ್ಡು ಕೊಡಲು ಹೋದರು. ತ್ವಾಟದ ದಂಪತಿ 'ಬ್ಯಾಡ್ರಿ ಮಾಸ್ತರ ಮಂದಿ ಅದಿರಿ, ನಿಮ್ಮ ಕಡೆ ದುಡ್ಡು ಇಸಕೊಳ್ಳೋದು ಸರಿ ಬರಾಂಗಿಲ್ಲರೀ' ಎಂದು ಹೇಳಿ ಗಂಡ ಹೆಂಡತಿ ಮಾಸ್ತರರಿಗೆ ಕೈ ಮುಗಿದು ಬೀಳ್ಕೊಟ್ಟರು.

***

ಇತ್ತ ಮೂಡಗಲ್ಲು ಸಂಸ್ಥಾನದ ದಂಪತಿಗಳ ಪಯಣ ಕುದುರೆಯನ್ನರಸಿ ಮುಂದೆ ನಡೆದಿತ್ತು. ಯಾವ ಪ್ರಗತಿದಾಯಕ ಫಲಿತಾಂಶ ಲಭ್ಯವಾಗದೇ ದಂಪತಿಗಳಿಗೆ ನಿರಾಸೆಯಾಯಿತು. ಪಾಪ ಯಾಗದ ಕುದುರೆ ತಪ್ಪಿಸಿಕೊಂಡು ಯಾವ ಪರಿಸ್ಥಿತಿ ಅನುಭವಿಸುತ್ತಿದೆಯೋ ಎಂದು ಮರುಗಿದರು. ಸಂಜೆಯಾಗುತ್ತಾ ಬಂದಿತ್ತು. ಇನ್ನು ಹುಡುಕುವುದು ತರವಲ್ಲ ಎಂದು ತಮ್ಮ ಅರಮನೆ ಕಡೆಗೆ ವಾಪಸ್ಸು ಪ್ರಯಾಣ ಹೊರಟರು. ಇತ್ತ ಗುಣಸಿರಿ ಮಾಸ್ತರ ಮಂದಿಗೂ ನಿರಾಸೆಯಾಗಿ ಮರಳಿದರು. ಆಗಿನ್ನೂ ಮೊಬೈಲ್ ಸಂಪರ್ಕವಿರಲಿಲ್ಲ. ರಾತ್ರಿ ಬಂದು ಲ್ಯಾಂಡ್ ಫೋನ್‌ನಿಂದ ಕರೆ ಮಾಡಿ ನಿರಾಸೆ ಹಂಚಿಕೊಂಡರು. ನಾಳೆಗೆ ಏನಾದರೂ ಮಾಡಿದರಾಯ್ತೆಂದು ಇಂದಿನ ದಿನವನ್ನು ಹುಡುಕುವುರಲ್ಲೇ ಕಳೆದು ರಾತ್ರಿ ಊಟ ಮಾಡಿ ನಿದ್ರೆಯಲ್ಲಿ ಕಳೆದು ಹೋದರು.

***

ಮರುದಿನ ರವಿವಾರ ಬೆಳ್ಳಂ ಬೆಳಿಗ್ಗೆ ಜಿಲ್ಲಾ ಕೇಂದ್ರದಿಂದ ಕೇಂದ್ರದ ಆಡಳಿತ ಮಂಡಳಿ ದೌಡಾಯಿಸಿ ಬಂದರು. ಅರಮನೆಯ ಆವರಣದಲ್ಲಿ ಸಭೆ ಜರುಗಿತು. ಪಾಠ ಮಾಡುವ ಮಾಸ್ತರು, ಆಟದ ಮಾಸ್ತರು ಹಾಗೂ ಉಳಿದ ಸಿಬ್ಬಂದಿ ಎಲ್ಲರೂ ಸಭೆಯಲ್ಲಿ ಪಾಲ್ಗೊಂಡಿದ್ದರು. ಎಲ್ಲರಲ್ಲೂ ಆತಂಕ ಮನೆ ಮಾಡಿತ್ತು. ಮಂತ್ರಿಗಳು ಕೊಟ್ಟ ಯಾಗದ ಕುದುರೆ ಎಲ್ಲಿಯೇ ಇರಲಿ ಅದನ್ನು ಹುಡುಕುವುದೆಂದು ಮತ್ತು ಸಿಗದಿದ್ದರೆ ಪೊಲೀಸ್ ಸ್ಟೇಷನ್‌ಗಳಿಗೆ ತಿಳಿಸಿ ಹುಡುಕಲು ಹಚ್ಚುವುದೆಂದು ಸಭೆ ತೀರ್ಮಾನ ತೆಗೆದುಕೊಂಡು, ಜವಾಬ್ದಾರಿಗಳ ಹಂಚಿಕೆ ಮಾಡುತ್ತಿದ್ದಾಗ ಹೊರಗೆ ಮಕ್ಕಳು ಜೋರಾಗಿ ಮುಗಿಲು ಕತ್ತರಿಸಿ ಬೀಳುವ ಹಾಗೆ ಹೋ ಎಂದು ಚೀರತೊಡಗಿದರು. ಯಾರಿಗೆ ಏನಾಯಿತೆಂದು ಎಲ್ಲರೂ ತಡಬರಿಸಿ ಹೊರ ಓಡಿ ಬಂದರು. ಮಕ್ಕಳು ಸಂಭ್ರಮದಿಂದ ಕುಣಿಯುತ್ತಾ ಜೈಕಾರ ಹಾಕುತ್ತಾ 'ನಮ್ಮ ಕುದುರೆ ಬಂತು ನಮ್ಮ ಕುದುರೆ ಬಂತು' ಎಂದು ಚೀರತೊಡಗಿದರು. ಎಲ್ಲರೂ ಮೂಕವಿಸ್ಮಿತರಾಗಿ ಗೇಟಿನ ಕಡೆ ನೋಡಿದರು. ಕಣ್ಣು ಮೂಗಿನಿಂದ ಚೆಲುವೆಯಾದ, ಎತ್ತರ ನಿಲುವಿನ ಹುಡುಗಿಯೊಬ್ಬಳು ಝಾನ್ಸಿರಾಣಿ ರೀತಿಯಲ್ಲಿ ಕುದುರೆಯನ್ನು ಹತ್ತಿ ಅದನ್ನು ಓಡಿಸಿಕೊಂಡು ಬಂದಿದ್ದಳು. ನೇರ ಆಡಳಿತ ಕಚೇರಿ ಮುಂದೆ ಬಂದು ಕುದುರೆ ಮೇಲಿಂದ ಜಿಗಿದು ತಮ್ಮ ಕುದುರೇನ ತಂದೀನಿ ತೆಗೆದುಕೊಳ್ಳಿ ಎನ್ನುವ ರೀತಿಯಲ್ಲಿ ಕೈ ಮುಗಿದು ಆಡಳಿತಗಾರರಿಗೆ ಒಪ್ಪಿಸಿದಳು.

ಎಲ್ಲರಲ್ಲೂ ಆಶ್ಚರ್ಯ ಇವಳಾರು ಎಂದು. ಎಲ್ಲರೂ 'ಬಹಳ ಸಂತೋಷ ಬಾರಮ್ಮ' ಎಂದು ಅವಳನ್ನು ಅತ್ಯಂತ ಆಪ್ತವಾಗಿ ಮಾತನಾಡಿಸಿ ಅವಳಿಗೆ ಕೃತಜ್ಞತೆ ಹೇಳಿದರು. ಅದೇ ಹೊತ್ತಿಗೆ ಹಿಂದೆ ಬೈಕಿನಲ್ಲಿ ನಿನ್ನೆ ಊಟ ಕೊಟ್ಟ ದಘೂತಿಯೂ ಮತ್ತು ಅವನ ಹೆಂಡತಿಯೂ ಬಂದರು. ಬಂದವರೇ ಆಡಳಿತ ಮಂಡಳಿ ಅವರಿಗೆ ಕೈ ಮುಗಿದು 'ಇವಳು ನನ್ನ ಮಗಳು ಸಿರಿವಂತೆ, ನಿನ್ನೆ ಸಂಜೆ ಹೊತ್ತಿಗೆ ಸಾಂಗ್ಲಿಯಿಂದ ಬಂದು, ಬಸ್ಸಿನಿಂದ ಇಳಿದು ನಮ್ಮ ತ್ವಾಟಕ್ಕೆ ಬರುವಾಗ ದಾರಿಯಲ್ಲಿ ಮುಳ್ಳು ಕಂಟಿಯ ಹಳೆ ಬಾವಿಯಲ್ಲಿ ಈ ಕುದುರೆ ಬಿದ್ದದ್ದನ್ನು ಗಮನಿಸಿ ನಮ್ಮನ್ನೆಲ್ಲಾ ಕರೆದಳು. ನಾವೆಲ್ಲಾ ಸೇರಿ ಅದನ್ನು ಮೇಲೆ ತಂದು ಆರೈಕೆ ಮಾಡಿದೆವು. ನಿನ್ನೆಯಷ್ಟೇ ತಮ್ಮ ಮಾಸ್ತರ ಮಂದಿ ತಮ್ಮ ಕುದುರೆ ಕಳೆದದ್ದು ಹೇಳಿದ್ದರು, ಸ್ವತಃ ಕುದುರೆ ಸವಾರಿ ಬಲ್ಲ ನಮ್ಮ ಮಗಳು ತಮ್ಮ ಕುದುರೆ ತಂದಿದ್ದಾಳೆಂದು ವಿವರಿಸಿದರು. ದಂಪತಿಯ ಕಾಳಜಿಗೆ ಮತ್ತು ಅವರ ಮಗಳ ಸಾಹಸಕ್ಕೆ ಮೆಚ್ಚಿ ಆಡಳಿತ ಮಂಡಳಿಯವರು ತುಂಬಾ ಖುಷಿಗೊಂಡರು. ಅರಮನೆಯ ಆವರಣದಲ್ಲಿ ಕರೆದು ಸತ್ಕರಿಸಿದರು. ಮಹಾರಾಜರಿಗೆ ಸುದ್ದಿ ಮುಟ್ಟಿಸಿ ಸಂತಸ ಹಂಚಿಕೊಂಡರು. ಮತ್ತೆ ಅವಳಿಗೆ ಇಂದಿನಿಂದ ನೀನು ನಮ್ಮ ಶಾಲೆಯಲ್ಲಿಯೇ ಮಕ್ಕಳಿಗೆ ಕುದುರೆ ತರಬೇತಿ ನೀಡಲು ಸೇರಿಕೊಳ್ಳಬೇಕೆಂದು ನಾವು ಅತ್ಯಂತ ಸಂತೋಷದಿಂದ ನೇಮಕ ಮಾಡಿಕೊಳ್ಳುತ್ತಿದ್ದೇವೆಂದು ಘೋಷಿಸಿದರು. ದಂಪತಿಗಳ ಹರುಷಕ್ಕೆ ಪಾರವೇ ಇರಲಿಲ್ಲ. ಈ ಎಲ್ಲ ಘಟನೆಗಳನ್ನು ಕಣ್ಣು ಬಿಡದೇ ಗಮನಿಸುತ್ತಿದ್ದ ಹಾಕಿ ಮಾಸ್ತರರ ಖುಷಿ ಇಮ್ಮಡಿಯಾಗಿತ್ತು. ಉಳಿದ ಮಾಸ್ತರು ಹಿಂದಿನ ದಿನದ ಸಂಗತಿಯನ್ನು ಆಡಳಿತ ಮಂಡಳಿಯವರಿಗೆ ವಿವರಿಸಿದಾಗ ಅವರೆಲ್ಲಾ ಇದೊಂದು ಬೋನಸ್ ಖುಷಿಯೆಂದು ಬೀಗರನ್ನು ಒಪ್ಪಿಸಿ, ಹಾಕಿ ಮಾಸ್ತರಗೆ ಅವಳನ್ನು ತೆಗೆದುಕೊಳ್ಳುವ ತೀರ್ಮಾನವಾಯಿತು. ಕುದುರೆಯೊಂದಿಗೆ ಬಂದವಳು ಇಲ್ಲಿಯೇ ಒಂದಾಗಿ ಉಳಿದಳು.

ಪ್ರತಿಕ್ರಿಯಿಸಿ: feedback@sudha.co.in